# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **317** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **15/02/2024** |
| **ಉತ್ತರಿಸುವ ಸಚಿವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ ಮೂಲಕ ನೀಡಿದ ಕಾರ್ಮಿಕ ಕಾರ್ಡ್ಗಳ ಸಂಖ್ಯೆಯೆಷ್ಟು; ಕಾರ್ಮಿಕ ಕಾರ್ಡ್ ನೀಡುವ ಮಾನದಂಡಗಳೇನು; ಅನರ್ಹರಿಗೆ ನೀಡಿದ ಕಾರ್ಮಿಕ ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಅರ್ಹ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಲಾಗಿದ್ದು, ನೋಂದಣಿಗಾಗಿ ಆಯಾ ಮಂಡಳಿ ಹಾಗೂ ಯೋಜನೆಗಳಡಿ ನಿಗದಿಪಡಿಸಿರುವ ಮಾನದಂಡಗಳ ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯ ವತಿಯಿಂದ 40.82 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 18-60ರ ವಯೋಮಾನದ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಮಂಡಳಿಯ ತಂತ್ರಾಂಶ https:// kbocwwb.karnataka.gov.in/login ಲಾಗಿನ್‌ನಲ್ಲಿ ನಿಗದಿಪಡಿಸಿರುವ ಅರ್ಜಿಯನ್ನು ಭರ್ತಿಮಾಡಿ ನೋಂದಣಿ ಮಾಡಬಹುದಾಗಿದೆ.<br><br>**ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:**<br>**ಎ) ಉದ್ಯೋಗ ಪ್ರಮಾಣ ಪತ್ರ:** ಕಟ್ಟಡದ ಮಾಲೀಕರು / ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ ಅಸೋಸಿಯೇಷನ್ ನವರು ನಮೂನೆ - V(A) ರಲ್ಲಿ ನೀಡುವಂತಹ |

'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕರ ಸಂಘಗಳು ನಮೂನೆ- V(B) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು ನಮೂನೆ- V(C) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ- V(D) ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ.

**ಬಿ)** ಅರ್ಜಿದಾರರ ಬ್ಯಾಂಕ್ ಪುಸ್ತಕದ ಮುಖಪುಟದ ನಕಲು ಪ್ರತಿ

**ಸಿ)** ಅರ್ಜಿದಾರರು ಒಂದು ವರ್ಷದಲ್ಲಿ ಕನಿಷ್ಠ 90 ದಿನಗಳ ಕಾಲ ಕಟ್ಟಡ ಅಥವಾ ಇತರೆ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಸ್ವಯಂ ಧೃಢೀಕರಣ ಪ್ರಮಾಣ ಪತ್ರ ಮತ್ತು ಲಭ್ಯವಿದ್ದಲ್ಲಿ ವೇತನ ಚೀಟಿ ಅಥವಾ ಹಾಜರಾತಿ ವಹಿ.

ಮಂಡಳಿಯು ನಿಗದಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಪೂರೈಸದ ಕಾರ್ಮಿಕರು ನೋಂದಣಿಯಾಗಿದ್ದಲಿ ಅವರ ಗುರುತಿನ ಚೀಟಿಯನ್ನು ರದ್ದು ಪಡಿಸಲಾಗುತ್ತಿದೆ.

ರಾಜ್ಯದಾದ್ಯಂತ 3,54,128 ಅನರ್ಹ ನೋಂದಣಿಯನ್ನು ಪತ್ತೆ ಹಚ್ಚಲಾಗಿದ್ದು ಜಿಲ್ಲಾವಾರು ವಿವರವನ್ನು **ಅನುಬಂಧ-01 ರಲ್ಲಿ** ಒದಗಿಸಲಾಗಿದೆ.

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

ಈ ಮಂಡಳಿಯು ಜಾರಿಗೊಳಿಸುತ್ತಿರುವ ಈ ಕೆಳಕಂಡ ಯೋಜನೆಗಳಡಿ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ (ಕಾರ್ಮಿಕ ಕಾರ್ಡ್) ವಿತರಿಸುತ್ತಿದ್ದು, ವಿವರ ಕೆಳಗಿನಂತಿದೆ:

**(1) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:**

ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ಆನ್‌ಲೈನ್ ಮೂಲಕ ಉಚಿತವಾಗಿ ನೋಂದಾಯಿಸಿ ಕಾರ್ಮಿಕ ಕಾರ್ಡ್/ಗುರುತಿನ ಚೀಟಿ ವಿತರಿಸಲಾಗುತ್ತಿದ್ದು, ಈವರೆಗೆ ಒಟ್ಟು 2,96,724 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ನೀಡಲಾಗಿದ್ದು, ಮಾನದಂಡಗಳು ಈ ಕೆಳಗಿನಂತಿವೆ:

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 60 ವರ್ಷಗಳು.
- ಮೇಲಿನ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ

ಅನ್ವಯಿಸುತ್ತದೆ.

- ಅರ್ಜಿದಾರರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಅನುಸೂಚಿ II ರಲ್ಲಿ ನಮೂದಿಸಿರುವ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿರಬಾರದು.

**(2) ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:**
ಹೊಸದಾಗಿ ರೂಪಿಸಿರುವ ಈ ಯೋಜನೆಯಡಿ ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರನ್ನು ಸೇವಾಸಿಂಧು ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಲಾಗುತ್ತಿದ್ದು, ಈವರೆಗೆ ಒಟ್ಟು 2,141 ಗಿಗ್ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ನೀಡಲಾಗಿದ್ದು, ಮಾನದಂಡಗಳು ಈ ಕೆಳಗಿನಂತಿವೆ:

- ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರು.
- 18-60 ವಯೋಮಾನದವರಾಗಿರಬೇಕು.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಇ.ಎಸ್.ಐ. ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.
- ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು.
- ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು.

**ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:**

ದಿನಪತ್ರಿಕೆ ವಿತರಣಾ ಕಾರ್ಮಿಕರಿಗೆ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುತ್ತಿರುವ ಈ ಯೋಜನೆಯಡಿ, ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್ ನಲ್ಲಿ News Paper Delivery Boy ಎಂದು ನೋಂದಾಯಿತ ದಿನಪತ್ರಿಕೆ ವಿತರಿಸುವ ಕಾರ್ಮಿಕರು ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿದ್ದು, ಈವರೆಗೆ ಒಟ್ಟು 5,518 ದಿನಪತ್ರಿಕೆ ವಿತರಕರು ನೋಂದಣಿಗೊಂಡು ಗುರುತಿನ ಚೀಟಿ ಪಡೆದಿದ್ದು, ಮಾನದಂಡಗಳು ಈ ಕೆಳಗಿನಂತಿವೆ:

- ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- 16-59 ವಯೋಮಾನದವರಾಗಿರಬೇಕು.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಇ.ಎಸ್.ಐ. ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.
- ಇ-ಶ್ರಮ್ ಪೋರ್ಟಲ್‌ನಲ್ಲಿ "News Paper Boy" ವರ್ಗದಡಿ ನೋಂದಣಿಯಾಗಿರಬೇಕು.

**ಇ-ಶ್ರಮ್ ಕಾರ್ಯಕ್ರಮದಡಿ ಅಸಂಘಟಿತ ಕಾರ್ಮಿಕರ ನೋಂದಣಿ**: ಅಸಂಘಟಿತ ಕಾರ್ಮಿಕರ ದತ್ತಾಂಶ ಸಂಗ್ರಹಣೆಯ ಉದ್ದೇಶದಿಂದ ಜಾರಿಗೆ ತಂದ ಕೇಂದ್ರ ಸರ್ಕಾರದ ಈ ಕಾರ್ಯಕ್ರಮದಡಿ 33 ವಲಯಗಳ ಒಟ್ಟು 379 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ನಲ್ಲಿ ಉಚಿತವಾಗಿ ನೋಂದಾಯಿಸಿ ಗುರುತಿನ ಚೀಟಿಯನ್ನು ನೀಡಲಾಗುತ್ತಿದ್ದು, ಈವರೆಗೆ ಒಟ್ಟು 80,18,436 ಕಾರ್ಮಿಕರು

| | | |
|---|---|---|
| | | ನೋಂದಣಿಯಾಗಿದ್ದು, ಮಾನದಂಡಗಳು ಈ ಕೆಳಗಿನಂತಿವೆ:<br>• ಅರ್ಜಿದಾರರು ಕೇಂದ್ರ ಸರ್ಕಾರವು ಗುರುತಿಸಿರುವ 379 ವರ್ಗಗಳ ಅಸಂಘಟಿತ ಕಾರ್ಮಿಕರ ವ್ಯಾಪ್ತಿಗೆ ಒಳಪಟ್ಟಿರಬೇಕು.<br>• 16 ರಿಂದ 59 ವರ್ಷ ವಯೋಮಾನ.<br>• ಆದಾಯ ತೆರಿಗೆ ಪಾವತಿದಾರರಾಗಿರಬಾರದು.<br>• ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು.<br>ಮೇಲ್ಕಂಡ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಜಿಲ್ಲಾವಾರು ವಿವರವನ್ನು **ಅನುಬಂಧ-2 ರಲ್ಲಿ** ಒದಗಿಸಲಾಗಿದೆ.<br><br>ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ನೋಂದಣಿಗಾಗಿ ಸಲ್ಲಿಸಲಾದ ಅರ್ಜಿಗಳನ್ನು ನೋಂದಣಾಧಿಕಾರಿಗಳಾದ ಕಾರ್ಮಿಕ ಅಧಿಕಾರಿಗಳು/ಕಾರ್ಮಿಕ ನಿರೀಕ್ಷಕರುಗಳು ಯೋಜನೆಗಳ ಮಾನದಂಡಗಳನ್ವಯ ನೋಂದಾಯಿಸುತ್ತಿದ್ದು, ಯಾವುದೇ ಅನರ್ಹ ಕಾರ್ಮಿಕರು ನೋಂದಣಿಯಾಗಿರುವುದಿಲ್ಲ.<br><br>ಮುಂದುವರೆದು, ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲು ಕೇಂದ್ರ ಇ-ಶ್ರಮ್ ಪೋರ್ಟಲ್ ಅನ್ನು ಅಭಿವೃಧ್ಧಿಪಡಿಸಿದ್ದು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರನ್ವಯ ಸ್ವಯಂ ಘೋಷಣೆ ಆಧಾರದ ಮೇಲೆ ನೋಂದಣಿ ಕಾರ್ಯ ನಡೆಸಲಾಗುತ್ತಿದೆ. ಕಾರ್ಮಿಕರ ಅರ್ಹತೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು Data Verification Portal ಅಭಿವೃದ್ಧಿಪಡಿಸುತ್ತಿದ್ದು, ತಂತ್ರಾಂಶ ಅಭಿವೃದ್ಧಿಗೊಂಡ ನಂತರ ಪರಿಶೀಲನಾ ಕಾರ್ಯ ಕೈಗೊಳ್ಳಲಾಗುವುದು |
| ಆ) | ಕಾರ್ಮಿಕ ಕಾರ್ಡ್‌ಗಳನ್ನು ಹೊಂದಿರುವವರು 60 ವರ್ಷ ಪೂರ್ಣಗೊಂಡಾಗ ಕಾರ್ಡ್ ಸ್ವಯಂಪ್ರೇರಿತವಾಗಿ ರದ್ದಾಗುತ್ತದೆ ಮತ್ತು ಅವರು ಆರು ತಿಂಗಳೊಳಗೆ ಕಾರ್ಮಿಕ ನಿವೃತ್ತಿ ವೇತನಕ್ಕೆ ಅರ್ಜಿ ಸಲ್ಲಿಸಬೇಕಿದ್ದು ಈ ಅವಧಿಯೊಳಗೆ ಅರ್ಜಿ ಸಲ್ಲಿಸದಿದ್ದಲ್ಲಿ ಮುಂದೆ ಕಾರ್ಮಿಕರಿಗೆ ನಿವೃತ್ತಿ ವೇತನ ಅರ್ಜಿ ಸಲ್ಲಿಸಲು ಅವಕಾಶವಿಲ್ಲದ ಕಾರಣ ಹಾಗೂ ಕಾರ್ಮಿಕರಿಗೆ ಈ ಕುರಿತ ಮಾಹಿತಿಯಿಲ್ಲದೆ ಹಲವಾರು ಕಾರ್ಮಿಕರು ಕಾರ್ಮಿಕ ನಿವೃತ್ತಿ ವೇತನದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ನಿಯಮಗಳಲ್ಲಿ ಬದಲಾವಣೆ ಮಾಡಿ | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಪಿಂಚಣಿ ಸೌಲಭ್ಯವನ್ನು ಪಡೆಯಲು ಕಟ್ಟಡ ಮತ್ತು ಇತರೆ ನಿರ್ಮಾಣ (ಕಾರ್ಮಿಕರ ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮ, 2006 ರ ನಿಯಮ 39(1)(ಎ)ರನ್ವಯ 60 ವರ್ಷ ಪೂರ್ಣಗೊಳಿಸಿರುವ ಅರ್ಹ ಫಲಾನುಭವಿಗಳಿಗೆ ನಿಯಮ 49-ಸಿ ರಲ್ಲಿ 06 ತಿಂಗಳ ಕಾಲಾವಧಿಯನ್ನು ಅರ್ಜಿ ಸಲ್ಲಿಕೆಗಾಗಿ ನಿಗಧಿಪಡಿಸಲಾಗಿರುತ್ತದೆ. ಫಲಾನುಭವಿಗಳು ಈ ಸೌಲಭ್ಯದಿಂದ ವಂಚಿತರಾಗಬಾರದು ಎನ್ನುವ ಕಾರಣಕ್ಕೆ 06 ತಿಂಗಳ ದೀರ್ಘ ಕಾಲಾವಾಧಿಯನ್ನು ಫಲಾನುಭವಿಗಳಿಗೆ ನೀಡಲಾಗಿರುತ್ತದೆ. ಪ್ರಸ್ತುತ 06 ತಿಂಗಳ ಕಾಲಮಿತಿಯನ್ನು 01 ವರ್ಷಕ್ಕೆ ವಿಸ್ತರಿಸಿ, ಈಗಾಗಲೇ ದಿನಾಂಕ:12-01-2024 ರಂದು ಸರ್ಕಾರದಿಂದ ಅಧಿಸೂಚನೆಯನ್ನು ಹೊರಡಿಸಲಾಗಿದೆ. |

| | | |
|---|---|---|
| | ಸ್ವಯಂ ಪ್ರೇರಿತವಾಗಿ ನಿವೃತ್ತಿ ವೇತನ ಅರ್ಜಿ ಸ್ವೀಕಾರವಾಗುವ ಅಥವಾ ನಂತರ ಅರ್ಜಿ ಸಲ್ಲಿಸಲು ಸೂಕ್ತ ಅವಕಾಶ ನೀಡುವ ಕುರಿತು ಸರ್ಕಾರ ಯೋಚಿಸಿದೆಯೇ; (ವಿವರ ನೀಡುವುದು); | |
| ಇ) | ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಒಳಪಡದ ಹಾಗೂ ಕನಿಷ್ಠ ವೇತನ ನಿಯಮಗಳೂ ಅನ್ವಯವಾಗದ ಸ್ವಯಂಸೇವ ಮತ್ತು ಗೌರವಧನದ ಆಧಾರದಲ್ಲಿ ಸೇವೆ ಸಲ್ಲಿಸುವ ಇತರೆ ಕಾರ್ಮಿಕರಷ್ಟೇ ಕೆಲಸ ನಿರ್ವಹಿಸುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕರು, ಎಂಬಿಕೆ, ಎಲ್ ಸಿ ಆರ್ ಪಿ, ಬಿಸಿಯೂಟ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಸಂಸ್ಥೆಗಳ ಪಂಪು ಚಾಲಕರು/ನೀರು ನಿರ್ವಾಹಕರು, ಇತ್ಯಾದಿ ಕಾರ್ಮಿಕರನ್ನು ಯಾವುದಾದರೊಂದು ನಿಶ್ಚಿತ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕರು, ಎಂಬಿಕೆ, ಎಲ್ ಸಿ ಆರ್ ಪಿ, ಬಿಸಿಯೂಟ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಸಂಸ್ಥೆಗಳ ಪಂಪು ಚಾಲಕರು/ನೀರು ನಿರ್ವಾಹಕರು, ಇತ್ಯಾದಿ ಕಾರ್ಮಿಕರನ್ನು ಯಾವುದಾದರೊಂದು ನಿಶ್ಚಿತ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರುವ ಯಾವುದೇ ಪ್ರತ್ಯೇಕ ಯೋಜನೆಯನ್ನು ಜಾರಿಗೊಳಿಸುತ್ತಿಲ್ಲ.<br>ಆದರೆ, ಸದರಿ ಕಾರ್ಮಿಕರು ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಂಡು ಗುರುತಿನ ಚೀಟಿ ಪಡೆಯಬಹುದಾಗಿರುತ್ತದೆ. ಸದರಿ ದತ್ತಾಂಶವನ್ನು ಬಳಸಿಕೊಂಡು ಅಸಂಘಟಿತ ಕಾರ್ಮಿಕರಿಗೆ ವಿಶೇಷ ನೀತಿಗಳು ಹಾಗೂ ಯೋಜನೆಗಳನ್ನು ರೂಪಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿರುತ್ತದೆ.<br>ಮುಂದುವರೆದು, ಕೇಂದ್ರ ಸರ್ಕಾರದ ಯೋಜನೆಯಾದ ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್ (ಪಿಎಂ-ಎಸ್‌ವೈಎಂ) ಯೋಜನೆಯಡಿ 18-40 ವಯೋಮಾನದ ಮೇಲ್ಕಂಡ ವರ್ಗಗಳ ಕಾರ್ಮಿಕರು ಒಳಗೊಂಡಂತೆ ಎಲ್ಲಾ ಅಸಂಘಟಿತ ಕಾರ್ಮಿಕರು ವಂತಿಕೆದಾರರಾಗಿ ನೋಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3000/-ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ.<br>ಅಂಚೆ ಇಲಾಖೆ, ಬ್ಯಾಂಕ್ ಇತ್ಯಾದಿ ಸಂಸ್ಥೆಗಳು ನೀಡುತ್ತಿರುವ ಸೌಲಭ್ಯಗಳ ಕುರಿತ ಮಾಹಿತಿಯು ಕಾರ್ಮಿಕ ಇಲಾಖೆಗೆ ಅನ್ವಯಿಸುವುದಿಲ್ಲ. |
| ಈ) | ಸಮಾಜದ ಪ್ರತಿಯೊಬ್ಬರನ್ನು ಯಾವುದಾದರೊಂದು ಸಾಮಾನ್ಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರುವ ಬಗ್ಗೆ ಸರ್ಕಾರ ಕ್ರಮ ವಹಿಸಿದೆ; ಅಂಚೆ ಇಲಾಖೆ, ಬ್ಯಾಂಕು ಇತ್ಯಾದಿ ಸಂಸ್ಥೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಸರ್ಕಾರ ವಹಿಸಿದ ಕ್ರಮಗಳ ವಿವರ ನೀಡುವುದು? | |

**ಕಾಇ 106 ಎಲ್ ಇಟಿ 2024**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

## ಅನುಬಂಧ-01

### ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 317

### ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

| ಕ್ರ.ಸಂ | ಕಛೇರಿಯ ಹೆಸರು | ರದ್ದುಪಡಿಸಲಾದ ಕಾರ್ಡ್ ಗಳ ಸಂಖ್ಯೆ. |
|---|---|---|
| 1 | ಕಾರ್ಮಿಕ ಅಧಿಕಾರಿ, ಬೆಂಗಳೂರು | 5768 |
| 2 | ಕಾರ್ಮಿಕ ಅಧಿಕಾರಿ, ಬೆಂಗಳೂರು ಗ್ರಾಮಾಂತರ | 534 |
| 3 | ಕಾರ್ಮಿಕ ಅಧಿಕಾರಿ, ಬಾಗಲಕೋಟೆ | 5057 |
| 4 | ಕಾರ್ಮಿಕ ಅಧಿಕಾರಿ, ಬೆಳಗಾವಿ | 1156 |
| 5 | ಕಾರ್ಮಿಕ ಅಧಿಕಾರಿ, ಬಳ್ಳಾರಿ | 1843 |
| 6 | ಕಾರ್ಮಿಕ ಅಧಿಕಾರಿ, ಬೀದರ್ | 32,187 |
| 7 | ಕಾರ್ಮಿಕ ಅಧಿಕಾರಿ, ಚಾಮರಾಜನಗರ | 808 |
| 8 | ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು | 1634 |
| 9 | ಕಾರ್ಮಿಕ ಅಧಿಕಾರಿ ,ಚಿಕ್ಕಬಳ್ಳಾಪುರ | 1410 |
| 10 | ಕಾರ್ಮಿಕ ಅಧಿಕಾರಿ ಚಿತ್ರದುರ್ಗ | 1851 |
| 11 | ಕಾರ್ಮಿಕ ಅಧಿಕಾರಿ, ದಾವಣಗೆರೆ | 1676 |
| 12 | ಕಾರ್ಮಿಕ ಅಧಿಕಾರಿ, ಹುಬ್ಬಳ್ಳಿ | 10780 |
| 13 | ಕಾರ್ಮಿಕ ಅಧಿಕಾರಿ, ಮಂಗಳೂರು | 1120 |
| 14 | ಕಾರ್ಮಿಕ ಅಧಿಕಾರಿ, ಗದಗ | 3531 |
| 15 | ಕಾರ್ಮಿಕ ಅಧಿಕಾರಿ, ಹಾಸನ | 2041 |
| 16 | ಕಾರ್ಮಿಕ ಅಧಿಕಾರಿ, ಹಾವೇರಿ | 223230 |
| 17 | ಕಾರ್ಮಿಕ ಅಧಿಕಾರಿ, ಕಲಬುರಗಿ | 7233 |
| 18 | ಕಾರ್ಮಿಕ ಅಧಿಕಾರಿ, ಕೊಡಗು | 170 |
| 19 | ಕಾರ್ಮಿಕ ಅಧಿಕಾರಿ, ಕೋಲಾರ | 1456 |
| 20 | ಕಾರ್ಮಿಕ ಅಧಿಕಾರಿ, ಕೊಪ್ಪಳ | 1309 |
| 21 | ಕಾರ್ಮಿಕ ಅಧಿಕಾರಿ, ಮಂಡ್ಯ | 359 |
| 22 | ಕಾರ್ಮಿಕ ಅಧಿಕಾರಿ,ಮೈಸೂರು | 1640 |
| 23 | ಕಾರ್ಮಿಕ ಅಧಿಕಾರಿ, ರಾಯಚೂರು | 655 |

| | | |
|---|---|---|
| 24 | ಕಾರ್ಮಿಕ ಅಧಿಕಾರಿ, ರಾಮನಗರ | 2171 |
| 25 | ಕಾರ್ಮಿಕ ಅಧಿಕಾರಿ, ತುಮಕೂರು | 803 |
| 26 | ಕಾರ್ಮಿಕ ಅಧಿಕಾರಿ, ಶಿವಮೊಗ್ಗ | 7530 |
| 27 | ಕಾರ್ಮಿಕ ಅಧಿಕಾರಿ, ಯಲ್ಲಾಪುರ | 2474 |
| 28 | ಕಾರ್ಮಿಕ ಅಧಿಕಾರಿ, ಕಾರವಾರ | 28796 |
| 29 | ಕಾರ್ಮಿಕ ಅಧಿಕಾರಿ, ಉಡುಪಿ | 187 |
| 30 | ಕಾರ್ಮಿಕ ಅಧಿಕಾರಿ ವಿಜಯಪುರ | 2237 |
| 31 | ಕಾರ್ಮಿಕ ಅಧಿಕಾರಿ, ವಿಜಯನಗರ | 1612 |
| 32 | ಕಾರ್ಮಿಕ ಅಧಿಕಾರಿ, ಯಾದಗಿರಿ | 870 |
| | **ಒಟ್ಟು** | **3,54,128** |

## ಅನುಬಂಧ-02

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 317

### ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

| ಕ್ರ.ಸಂ. | ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ: | ಇ-ಶ್ರಮ್ ಪೋರ್ಟಲ್ ನಡಿ ನೋಂದಣಿ |
|---|---|---|---|---|---|
| 1 | ಬಾಗಲಕೋಟೆ | 12775 | 16 | 86 | 253164 |
| 2 | ಬೆಂಗಳೂರು ನಗರ | 33509 | 855 | 2018 | 368006 |
| 3 | ಬೆಂಗಳೂರು ಗ್ರಾಮಾಂತರ | 1486 | 24 | 141 | 160381 |
| 4 | ಬೆಳಗಾವಿ | 16473 | 24 | 195 | 753161 |
| 5 | ಬಳ್ಳಾರಿ | 20232 | 51 | 93 | 408296 |
| 6 | ಬೀದರ್ | 4317 | 27 | 50 | 273731 |
| 7 | ವಿಜಯಪುರ | 5062 | 29 | 134 | 237311 |
| 8 | ಚಾಮರಾಜನಗರ | 4628 | 4 | 182 | 193926 |
| 9 | ಚಿಕ್ಕಬಳ್ಳಾಪುರ | 4111 | 16 | 88 | 199590 |
| 10 | ಚಿಕ್ಕಮಗಳೂರು | 4292 | 92 | 61 | 175029 |
| 11 | ಚಿತ್ರದುರ್ಗ | 8638 | 27 | 153 | 262615 |
| 12 | ದಕ್ಷಿಣ-ಕನ್ನಡ | 9617 | 155 | 101 | 231362 |
| 13 | ದಾವಣಗೆರೆ | 15620 | 52 | 154 | 272280 |
| 14 | ಧಾರವಾಡ | 7319 | 21 | 248 | 281466 |
| 15 | ಗದಗ | 5570 | 45 | 71 | 167404 |
| 16 | ಕಲಬುರಗಿ | 9577 | 39 | 124 | 396996 |
| 17 | ಹಾಸನ | 6061 | 38 | 114 | 251777 |
| 18 | ಹಾವೇರಿ | 6662 | 6 | 107 | 319519 |
| 19 | ಕೊಡಗು | 3853 | 42 | 42 | 50752 |
| 20 | ಕೋಲಾರ | 2264 | 27 | 86 | 217079 |
| 21 | ಕೊಪ್ಪಳ | 6421 | 15 | 59 | 194779 |
| 22 | ಮಂಡ್ಯ | 6859 | 4 | 106 | 276288 |
| 23 | ಮೈಸೂರು | 13706 | 193 | 318 | 393465 |
| 24 | ರಾಯಚೂರು | 9822 | 17 | 71 | 225999 |
| 25 | ರಾಮನಗರ | 3391 | 20 | 92 | 154841 |
| 26 | ಶಿವಮೊಗ್ಗ | 8902 | 44 | 145 | 302060 |
| 27 | ತುಮಕೂರು | 14679 | 52 | 176 | 357928 |
| 28 | ಉಡುಪಿ | 6553 | 49 | 97 | 190067 |
| 29 | ಉತ್ತರ-ಕನ್ನಡ | 40692 | 151 | 133 | 255384 |
| 30 | ಯಾದಗಿರಿ | 3633 | 2 | 35 | 154733 |
| 31 | ವಿಜಯನಗರ | | 4 | 38 | 39047 |
| **ಒಟ್ಟು** | | **296724** | **2141** | **5518** | **8018436** |